ದಿನಾಂಕ 30.08.2025 ರಂದು ಸಾಕ್ಷಿಯನ್ನು ಕರೆಸಿ ವಿಧಿಬದ್ಧವಾದ ಪ್ರಮಾಣವಚನ ಭೋಧಿಸಲಾಯಿತು.

ಮುಂದುವರಿದ ಪಾಟೀ ಸವಾಲುಃ 1 ನೇ ಪ್ರತಿವಾದಿ ಪರ ಶ್ರೀಮತಿ. ಎಸ್.ಎಲ್.ಎ ವಕೀಲರಿಂದಃ

**4.** 4 ನೇ ಪ್ರತಿವಾದಿಗೆ ಮಾನಸಿಕವಾಗಿ ಎಷ್ಟು ಸಮಯದಿಂದ ಸರಿಯಾಗಿಲ್ಲ ಎಂದರೆ ಸಾಕ್ಷಿ 18 ವರ್ಷಗಳಿಂದ ಸರಿಯಿಲ್ಲ ಎಂದು ಹೇಳುತ್ತಾರೆ. ಅವರಿಗೆ ಏನಾಗಿದೆ ಎಂದರೆ ಸಾಕ್ಷಿ ಬಿ.ಪಿ, ಶುಗರ್ ಇದ್ದು ಅವರಿಗೆ ತಲೆ ಸರಿ ಇಲ್ಲ, ಮಾತನಾಡಲು ಆಗುವುದಿಲ್ಲ ಎಂದು ಹೇಳುತ್ತಾರೆ. ಮುಂದುವರಿದು ಒಮ್ಮೊಮ್ಮೆ ಮಾತನಾಡುತ್ತಾರೆ ಎಂದು ಹೇಳುತ್ತಾರೆ. ಒಮ್ಮೊಮ್ಮೆ ಊಟ ಮಾಡುತ್ತಾನೆ, ಒಮ್ಮೊಮ್ಮೆ ಮಾಡುವುದಿಲ್ಲ, ಕೊಟ್ಟದ್ದನ್ನು ಮಾತ್ರ ತಿನ್ನುತ್ತಾರೆ, ಬೇಕೆಂದು ಕೇಳುವುದಿಲ್ಲ ಎಂದು ಹೇಳುತ್ತಾರೆ. 4 ನೇ ಪ್ರತಿವಾದಿಗೆ ಹೊರಗಡೆ ಹೋಗುತ್ತಾರಾ ಎಂದರೆ ಸಾಕ್ಷಿ ಒಮ್ಮೊಮ್ಮೆ ಹೊರಗೆ ಹೋಗುತ್ತಾರೆ, ಆ ಸಮಯದಲ್ಲಿ ಜಾರಿ ಬೀಳುತ್ತಾರೆ, ಆಗ ತಂಗಿ ಒಮ್ಮೊಮ್ಮೆ ಹಿಡಿದುಕೊಳ್ಳುತ್ತಾರೆ ಎಂದು ಹೇಳುತ್ತಾರೆ. 4 ನೇ ಪ್ರತಿವಾದಿಯ ಕೆಲಸವನ್ನು ಬೇರೆಯವರು ಮಾಡಬೇಕು ಎಂದರೆ ಹೌದು. 4 ನೇ ಪ್ರತಿವಾದಿಗೆ ಬೆಳ್ತಂಗಡಿಗೆ ಬಂದಿದ್ದಾರಾ ಅಥವಾ ಬರಲು ಆಗುವುದಿಲ್ಲವಾ ಎಂದರೆ ಸಾಕ್ಷಿ ಬಂದಿರುವುದಿಲ್ಲ ಎಂದು ಹೇಳುತ್ತಾರೆ. 7 ನೇ ಪ್ರತಿವಾದಿಗೆ ಏನಾಗಿದೆ ಎಂದರೆ ಸಾಕ್ಷಿ ಅವರಿಗೆ ಹೃದಯ ಸಂಬಂಧಿ ಚಿಕಿತ್ಸೆಯಾಗಿದ್ದು 13 ವರ್ಷಗಳಿಂದ ಸರಿಯಾಗಿ ಕೆಲಸ ಮಾಡುವುದಿಲ್ಲ. 7 ನೇ ಪ್ರತಿವಾದಿ ಮಾನಸಿಕವಾಗಿ ಸ್ಥಿರತೆಯನ್ನು ಹೊಂದಿದ್ದಾರಾ ಎಂದರೆ ಇಲ್ಲ. 4 ಮತ್ತು 7 ನೇ ಪ್ರತಿವಾದಿ ಇಬ್ಬರೂ ಸಹ ಮದ್ದಿನಲ್ಲೆ ಇರುತ್ತಾರೆ. ನಾನು ಮದುವೆಯಾಗಿ ಹೋದ ನಂತರ ನನ್ನ ತಾಯಿ ಜೀವಂತ ಇದ್ದಾಗ 4 ಮತ್ತು 7 ನೇ ಪ್ರತಿವಾದಿ 1 ಮತ್ತು 2 ನೇ ಪ್ರತಿವಾದಿಯವರೊಂದಿಗೆ ವಾಸವಿದ್ದರು ಎಂದರೆ ಹೌದು. 4 ಮತ್ತು 7 ನೇ ಪ್ರತಿವಾದಿಯರನ್ನು 1 ಮತ್ತು 2 ನೇ ಪ್ರತಿವಾದಿ ನೋಡಿಕೊಳ್ಳುತ್ತಿದ್ದರು ಎಂದರೆ ಇಲ್ಲ, ನಾವು ಸಹ ನೋಡಿಕೊಳ್ಳುತ್ತಿದ್ದೆವು. ಎಷ್ಟು ದಿನಕ್ಕೊಮ್ಮೆ ಮನೆಗೆ ಹೋಗುತ್ತಿದ್ದಿರಿ ಎಂದರೆ ಸಾಕ್ಷಿ ವಾರಕ್ಕೊಮ್ಮೆ ಹೋಗುತ್ತಿದ್ದೆ ಎಂದು ಹೇಳುತ್ತಾರೆ. 4 ಮತ್ತು 7 ನೇ ಪ್ರತಿವಾದಿ ಮದ್ದು ಮಾಡಿಸಿದ ಬಗ್ಗೆ ದಾಖಲೆ ಇದೆಯಾ ಎಂದರೆ ಇಲ್ಲ, ಅದು ಮಿಸ್ ಆಗಿರುತ್ತದೆ. ಅವರಿಗೆ ಬೆಳ್ತಂಗಡಿಯ ಜಗನ್ನಾಥ್ ರವರ ಹತ್ತಿರ ಮದ್ದನ್ನು ಕೊಡಿಸಿರುತ್ತೇವೆ.

**5.** ನಿಮ್ಮ ತಾಯಿ ಜೀವಂತ ಇದ್ದಾಗ ದಾವಾ ಸ್ವತ್ತಿನ ಆರ್.ಟಿ.ಸಿ ಯನ್ನು ನೋಡಿದ್ದೀರಾ ಎಂದರೆ ಹೌದು. ಆಗ ಯಾರ ಹೆಸರಿನಲ್ಲಿತ್ತು ಎಂದರೆ ಸಾಕ್ಷಿ ನನ್ನ ತಾಯಿಯ ಹೆಸರಿನಲ್ಲಿತ್ತು ಎಂದು

ಹೇಳುತ್ತಾರೆ. ನನ್ನ ತಾಯಿಯವರು 2010 ರಲ್ಲಿ ಮೃತಪಟ್ಟಿರುತ್ತಾರೆ. ನನ್ನ ತಾಯಿಯವರು ತೀರಿದ ಕೂಡಲೇ ಆರ್.ಟಿ.ಸಿ ಯಾರ ಹೆಸರಿಗೆ ಬದಲಾವಣೆಯಾಗಿದೆ ಎಂದರೆ ಸಾಕ್ಷಿ 1 ಮತ್ತು 2 ನೇ ಪ್ರತಿವಾದಿಯರ ಹೆಸರಿಗೆ ಬಂದಿದೆ ಎಂದು ಹೇಳುತ್ತಾರೆ. ಉಯಿಲು ಆಧಾರದ ಮೇಲೆ 1 ಮತ್ತು 2 ನೇ ಪ್ರತಿವಾದಿಗೆ ಬದಲಾವಣೆಯಾಗಿದೆ ಎಂದರೆ ಹೌದು. ನೀವು ಅದಕ್ಕೆ ತಕರಾರು ಸಲ್ಲಿಸಿದ್ದೀರಾ ಎಂದರೆ ಇಲ್ಲ. ನನ್ನ ತಾಯಿ ತೀರಿದ ನಂತರವೂ ಸಹ ನಾನು ನನ್ನ ತವರು ಮನೆಗೆ ಹೋಗುತ್ತಿದ್ದೆ, 2021 ರಿಂದ ನಾನು ಹೋಗಿರುವುದಿಲ್ಲ. ದಾವೆ ದಾಖಲಿಸುವವರೆಗೂ ನನ್ನ ಮತ್ತು 1 ಮತ್ತು 2 ನೇ ಪ್ರತಿವಾದಿಯ ನಡುವೆ ಯಾವುದೇ ಬಿನ್ನಾಭಿಪ್ರಾಯ ಇರಲಿಲ್ಲ, ಚೆನ್ನಾಗಿ ಇದ್ದೆವು. ತಾಯಿ ತೀರಿದ ಕೂಡಲೇ 1 ಮತ್ತು 2 ನೇ ಪ್ರತಿವಾದಿಯ ಹೆಸರಿಗೆ ಆರ್.ಟಿ.ಸಿ ಬದಲಾವಣೆಯಾಗಿದ್ದು, ಆ ಸಮಯದಲ್ಲಿ ಭಾಗ ಕೊಡಿ ಎಂದು ಕೇಳಿದ್ದೀರಾ ಎಂದರೆ ಹೌದು. ಸಾಕ್ಷಿ ಮುಂದುವರಿದು ಆರ್.ಟಿ.ಸಿಯನ್ನು ನೋಡುವಾಗ ನನ್ನ ಹೆಸರು ಇರಲಿಲ್ಲ,1 ಮತ್ತು 2 ನೇ ಪ್ರತಿವಾದಿಯ ಹೆಸರಿನಲ್ಲಿತ್ತು ಎಂದು ಹೇಳುತ್ತಾರೆ. ತಾಯಿ ತೀರುವ ದಿನ ನೀವು ಗಂಡನ ಮನೆಯಲ್ಲಿದ್ದಿರಾ ಅಥವಾ ತಾಯಿಯ ಮನೆಯಲ್ಲಿದ್ದಿರಾ ಎಂದರೆ ಸಾಕ್ಷಿ ಅದರ ಹಿಂದಿನ ದಿನ ತಾಯಿಯ ಮನೆಯಲ್ಲಿದ್ದೆ ಎಂದು ಹೇಳುತ್ತಾರೆ. ತಾಯಿಯವರು ಏನಾಗಿ ತೀರಿದ್ದಾರೆ ಎಂದರೆ ಸಾಕ್ಷಿ ವಯಸ್ಸಾದ ಕಾರಣ ತೀರಿದ್ದಾರೆ ಎಂದು ಹೇಳುತ್ತಾರೆ. ಸಾಕ್ಷಿ ಮುಂದುವರಿದು ಅವರಿಗೆ ಬಿ.ಪಿ, ಶುಗರ್ ಮತ್ತು ವಯೋವೃದ್ಧ ಕಾಯಿಲೆ ಇದ್ದು ಸಹಜವಾಗಿ ತೀರಿದ್ದಾರೆ ಎಂದು ಹೇಳುತ್ತಾರೆ. ತಾಯಿ ತೀರುವಾಗ ತಾಯಿಯ ಮನೆಯ ಹೋಗಿ ಎಷ್ಟು ದಿನಗಳ ಕಾಲ ಇದ್ದಿರಿ ಎಂದರೆ ಸಾಕ್ಷಿ 5 ದಿನಗಳ ಕಾಲ ಇದ್ದೆ ಎಂದು ಹೇಳುತ್ತಾರೆ. ತದನಂತರ ಆ ಮನೆಗೆ ಯಾವಾಗ ಹೋಗಿದ್ದೀರಿ ಎಂದರೆ ಸಾಕ್ಷಿ 11 ದಿನದ ಕಾರ್ಯಕ್ಕೆ ಹೋಗಿ ರಾತ್ರಿ ಇದ್ದು, ನಂತರ ಮರುದಿನ ಮನೆಗೆ ಹೋಗಿದ್ದೇನೆ ಎಂದು ಹೇಳುತ್ತಾರೆ. ತಾಯಿಯ ಕಾರ್ಯವನ್ನು ಮುಗಿಸಿ ಗಂಡನ ಮನೆಗೆ ಹೋದ ನಂತರ ಪುನಃ ಯಾವಾಗ ತಾಯಿಯ ಮನೆಗೆ ಬಂದಿದ್ದೀರಿ ಎಂದರೆ ಸಾಕ್ಷಿ 16 ನೇ ದಿನದ ಕಾರ್ಯಕ್ಕೆ ನನ್ನ ತಾಯಿಯ ಮನೆಗೆ ಹೋಗಿದ್ದೆ ಎಂದು ಹೇಳುತ್ತಾರೆ. ನಂತರ 16 ನೇ ದಿನದ ಕಾರ್ಯ ಮುಗಿದ ನಂತರ ಅದೇ ದಿನ ಗಂಡನ ಮನೆಗೆ ರಾತ್ರಿ ಹೋಗಿರುತ್ತೇನೆ. ಸಾಕ್ಷಿ ಮುಂದುವರಿದು ಎಲ್ಲದಕ್ಕೂ ಖರ್ಚು ಕೊಟ್ಟಿದ್ದೇವೆ ಎಂದು ಹೇಳುತ್ತಾರೆ. ನೀವು ಖರ್ಚು ಎಷ್ಟು ಕೊಟ್ಟಿದ್ದೀರಿ ಎಂದರೆ ಸಾಕ್ಷಿ ರೂ. 800 ಕೊಟ್ಟಿದ್ದೇವೆ ಎಂದು ಹೇಳುತ್ತಾರೆ. ನಾನು ಆ ರೀತಿ ಖರ್ಚಿಗೆ ಹಣ ಕೊಟ್ಟಿಲ್ಲ ಎಂದರೆ ಸರಿಯಲ್ಲ.

**6.** 1 ನೇ ಪ್ರತಿವಾದಿ ಅದೇ ಮನೆಯಲ್ಲಿದ್ದಾರಾ ಎಂದರೆ ಇಲ್ಲ, ಬೇರೆ ಮನೆಯಲ್ಲಿದ್ದಾರೆ. 1 ನೇ ಪ್ರತಿವಾದಿ ಯಾವಾಗ ಬೇರೆ ಹೋಗಿದ್ದಾರೆ ಎಂದರೆ ಸಾಕ್ಷಿ 2020 ರಲ್ಲಿ 1 ನೇ ಪ್ರತಿವಾದಿ ಬೇರೆ ಮನೆ

ಮಾಡಿ ವಾಸವಿದ್ದಾರೆ ಎಂದು ಹೇಳುತ್ತಾರೆ. ಆ ರೀತಿ ಬೇರೆ ಮನೆಯನ್ನು 1 ನೇ ಪ್ರತಿವಾದಿ ದಾವಾ ಆಸ್ತಿಯಲ್ಲಿ ಮಾಡಿಕೊಂಡಿದ್ದಾರೆ. ಯಾವ ಸರ್ವೇ ನಂಬರ್ ನಲ್ಲಿ ಮಾಡಿಕೊಂಡಿದ್ದಾರೆ ಎಂದರೆ ಸಾಕ್ಷಿ ಸರ್ವೇ ನಂಬರ್ ಹೇಳಲು ಆಗುವುದಿಲ್ಲ ಎಂದು ಹೇಳುತ್ತಾರೆ. ದಾವಾ ಆಸ್ತಿಯಲ್ಲಿ ಯಾರು ಕೃಷಿ ಮಾಡುತ್ತಿದ್ದಾರೆ ಎಂದರೆ ಸಾಕ್ಷಿ 1 ಮತ್ತು 2 ನೇ ಪ್ರತಿವಾದಿಯರು ಸಾಗುವಳಿ ಮತ್ತು ಕೃಷಿ ಮಾಡುತ್ತಿದ್ದಾರೆ ಎಂದು ಹೇಳುತ್ತಾರೆ. ಸಾಕ್ಷಿ ಮುಂದುವರಿದು ತಾಯಿ ತೀರಿದ ದಿನದಿಂದಲೂ ಸಹ 1 ಮತ್ತು 2 ನೇ ಪ್ರತಿವಾದಿಯರೇ ಕೃಷಿ ಮಾಡುತ್ತಿದ್ದಾರೆ. 1 ಮತ್ತು 2 ನೇ ಪ್ರತಿವಾದಿಯರು ವಿಭಾಗ ಮಾಡಿಕೊಂಡಿದ್ದಾರಾ ಎಂದರೆ ಇಲ್ಲ.

**7.** ಒಟ್ಟು 8.71 ಎಕರೆಗೆ ಸಂಬಂಧಪಟ್ಟಂತೆ ದಾವೆ ದಾಖಲು ಮಾಡಿದ್ದೇನೆ. ಸದರಿ ಸ್ವತ್ತಿನಲ್ಲಿ ಗದ್ದೆ ಮತ್ತು ತೆಂಗು ಹಾಗೂ ಅಡಿಕೆ ತೋಟ ಇರುತ್ತದೆ. 500 ತೆಂಗು ಉತ್ಪತ್ತಿಯಾಗುತ್ತದೆ, ಅಡಿಕೆ 5 ಕ್ವಿಂಟಲ್ ಉತ್ಪತ್ತಿಯಾಗುತ್ತದೆ. ಗದ್ದೆ ಸಾಧಾರಣ ಎಷ್ಟು ವಿಸ್ತೀರ್ಣದಲ್ಲಿದೆ ಎಂದರೆ ಸಾಕ್ಷಿ ಅಂದಾಜು 2 ಎಕರೆ ಇದೆ ಎಂದು ಹೇಳುತ್ತಾರೆ. ಸಾಕ್ಷಿ ಮುಂದುವರಿದು 5 ಕ್ವಿಂಟಲ್ ಭತ್ತ ಉತ್ಪತ್ತಿಯಾಗುತ್ತದೆ ಎಂದು ಹೇಳುತ್ತಾರೆ. ದಾವಾ ಸ್ವತ್ತು ಬಂದ ಬಗ್ಗೆ ದಾಖಲೆಗಳನ್ನು ಪರಿಶೀಲನೆ ಮಾಡಿದ್ದೀರಾ ಎಂದರೆ ಇಲ್ಲ. ಕುಶಾಲಪ್ಪ ಗೌಡರ ಪರಿಚಯ ಇದೆಯಾ ಎಂದರೆ ಹೌದು. ಅವರು ಯಾವ ಊರು ಎಂದರೆ ಸಾಕ್ಷಿ ಬೆಳಾಲು ಗ್ರಾಮ ಎಂದು ಹೇಳುತ್ತಾರೆ. ಕುಶಾಲಪ್ಪ ಗೌಡ ನನ್ನ ಸಂಬಂಧಿಕ, ನನ್ನ ತಂದೆಯ ಅಣ್ಣತಮ್ಮಂದಿರ ಮಕ್ಕಳು. ಅವರ ಮತ್ತು ನಮ್ಮ ನಡುವೆ ಸಂಬಂಧ ಚೆನ್ನಾಗಿದೆ, ಜಗಳ ಇರುವುದಿಲ್ಲ. ನನ್ನ ತಾಯಿ ಮಾನಸಿಕವಾಗಿ ಮತ್ತು ದೈಹಿಕವಾಗಿ ಚೆನ್ನಾಗಿದ್ದಾಗ ದಾವಾ ಸ್ವತ್ತುಗಳನ್ನು 1 ಮತ್ತು 2 ನೇ ಪ್ರತಿವಾದಿಗೆ ಉಯಿಲುನಾಮೆ ಮೂಲಕ ನೀಡಿದ್ದಾರೆ ಎಂದರೆ ಸುಳ್ಳು. ಸಾಕ್ಷಿ ಮುಂದುವರಿದು ಮಾನಸಿಕವಾಗಿ ಇರುವಾಗಲೇ ನನ್ನ ತಾಯಿ ಹೊರಗಡೆ ಹೋಗಲು ಆಗುತ್ತಿರಲಿಲ್ಲ, ಆಗ 1 ಮತ್ತು 2 ನೇ ಪ್ರತಿವಾದಿಯರು ಉಯಿಲುನಾಮೆಯನ್ನು ಬರೆಸಿಕೊಂಡಿರುತ್ತಾರೆ, ಆ ವಿಚಾರ ನನ್ನ ತಾಯಿಯವರಿಗೆ ಗೊತ್ತಾಗಿರುವುದಿಲ್ಲ ಎಂದು ಹೇಳುತ್ತಾರೆ. ಸಾಕ್ಷಿ ಪುನಃ ಮುಂದುವರಿದು 1 ಮತ್ತು 2 ನೇ ಪ್ರತಿವಾದಿಯವರ ಹೆಸರಿಗೆ ಉಯಿಲುನಾಮೆ ಮಾಡಿಸಿಕೊಂಡಿರುವ ವಿಚಾರ ನನ್ನ ತಾಯಿಯವರಿಗೆ ಗೊತ್ತಾಗಿರುವುದಿಲ್ಲ ಎಂದು ಹೇಳುತ್ತಾರೆ. ನನ್ನ ತಾಯಿಯವರು ಅವರೇ ಅನುಭವ ಕೊಟ್ಟು ಸ್ವ ಇಚ್ಛೆಯಿಂದ ದಿಃ 3.2.2009 ರಂದು ಉಯಿಲುನಾಮೆಯನ್ನು ಬರೆದುಕೊಟ್ಟಿದ್ದಾರೆ ಎಂದರೆ ಸುಳ್ಳು.

**8.** ನನ್ನ ಮದುವೆ ನೊಂದಣಿಯಾಗಿರುತ್ತದೆ. ನಾನು ಮದುವೆಯಾಗುವಾಗ ನನ್ನ ತಂದೆ ಇರಲಿಲ್ಲ. ನಾನು ನನ್ನ ಮನೆಯವರ ಹಾಗೂ ಕುಟುಂಬದವರ ಇಚ್ಛೆಗೆ ವಿರುದ್ಧವಾಗಿ ಮದುವೆಯಾಗಿ ಹೋಗಿದ್ದ ಕಾರಣ ನನ್ನ ಮನೆಯವರು ನನ್ನ ಮದುವೆಗೆ ಬಂದಿರುವುದಿಲ್ಲ ಎಂದರೆ ಸರಿಯಲ್ಲ. ಆ ರೀತಿ ಹೋದ ಕಾರಣ ನಾನು ನನ್ನ ತಾಯಿ ಹಾಗೂ 1 ಮತ್ತು 2ನೇ ಪ್ರತಿವಾದಿಯ ಹತ್ತಿರ ಮಾತನಾಡುತ್ತಿರಲಿಲ್ಲ ಹಾಗೂ ಮನೆಗೂ ಹೋಗುತ್ತಿರಲಿಲ್ಲ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರಿದು ಮದುವೆಯಾದ 2 – 3 ದಿನಗಳ ನಂತರ ಎಲ್ಲರೂ ಸರಿಹೋಗಿದ್ದಾರೆ, ಆಗ ನಾನು ಮನೆಗೆ ಹೋಗುತ್ತಿದ್ದೆ ಎಂದು ಹೇಳುತ್ತಾರೆ. ನನ್ನ ತಾಯಿಯವರು 1 ಮತ್ತು 2ನೇ ಪ್ರತಿವಾದಿಗೆ ಉಯಿಲುನಾಮೆ ಮಾಡಿಕೊಟ್ಟಿರುವ ವಿಚಾರ ಗೊತ್ತಿದ್ದರೂ ಸಹ ದಾವೆ ದಾಖಲು ಮಾಡುವವರೆಗೂ ಸುಮ್ಮನೆ ಇದ್ದು ಆನಂತರ ನಾನು ಮತ್ತು ಇತರೆ ಪ್ರತಿವಾದಿಯರು ಸೇರಿ 1 ನೇ ಪ್ರತಿವಾದಿಗೆ ತೊಂದರೆ ಕೊಡುವ ಉದ್ದೇಶದಿಂದ ಈ ದಾವೆ ಸಲ್ಲಿಸಿದ್ದೇನೆ ಎಂದರೆ ಸರಿಯಲ್ಲ. 4 ಮತ್ತು 7 ನೇ ಪ್ರತಿವಾದಿಯರು ಮಾನಸಿಕವಾಗಿ ಸರಿ ಇಲ್ಲದ ಕಾರಣ ಈ ವ್ಯಾಜ್ಯದ ಬಗ್ಗೆ ಯಾವುದೇ ವಿಚಾರ ಗೊತ್ತಿಲ್ಲ ಎಂದರೆ ಸಾಕ್ಷಿ ಸ್ವಲ್ಪ ಗೊತ್ತಾಗುತ್ತದೆ ಎಂದು ಹೇಳುತ್ತಾರೆ. ಸಾಕ್ಷಿ ಮುಂದುವರಿದು ಈ ವ್ಯಾಜ್ಯದ ಬಗ್ಗೆ ಅವರಿಗೆ ಗೊತ್ತು ಎಂದು ಹೇಳುತ್ತಾರೆ. ಎಲ್ಲಾ ಗೊತ್ತಿದ್ದರೂ ಸಹ ನ್ಯಾಯಾಲಯದಲ್ಲಿ ದುರ್ಲಾಭ ಮಾಡಲು ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಮರುವಿಚಾರಣೆ ಇರುವುದಿಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಿಸಲಾಯಿತು)

ಪ್ರಧಾನ ಸಿವಿಲ್ ನ್ಯಾಯಾಧೀಶರು
ಮತ್ತು ಪ್ರ.ದ.ನ್ಯಾದಂ. ಬೆಳ್ತಂಗಡಿ

(ಸಾ.ಓ.ಹೇ.ಕೇ.ಸ.ಇ.ಎ.ಒ)